**<u>ದಿನಾಂಕಃ 16.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಮುಂದುವರಿದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ</u>**

1) ನಾನು ಟ್ರಸ್ಟ್ ವೆಲ್ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿ.ಪಿ.**9** ಎಂದು, ವೈದ್ಯಕೀಯ ಖರ್ಚು ರೂ.**2,50,498/-** ಕ್ಕೆ ಸಂಬಂಧಿಸಿದಂತೆ **6** ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**10** ಎಂದು, **4** ಹಾಳೆಗಳ ಔಷಧಿ ಚೀಟಿಯನ್ನು ಹಾಜಪಡಿಸಿದ್ದು ನಿ.ಪಿ.**11** ಎಂದು ಗುರುತಿಸಿದ್ದೇನೆ.

2) **2019-20** ನೇ ಸಾಲಿನಲ್ಲಿ ನಾನು ಆದಾಯ ತೆರಿಗೆ ಪಾವತಿಸಿದ ಬಗ್ಗೆ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದು ನಿ.ಪಿ.**12** ಎಂದು ಗುರುತಿಸಿದ್ದೇನೆ.

3) ಆದ್ದರಿಂದ ಈ ಅರ್ಜಿಯಲ್ಲಿ ಕೋರಿರುವಂತೆ ಪರಿಹಾರವನ್ನು ನೀಡಬೇಕಾಗಿ ಪ್ರಾರ್ಥನೆ.

<u>ಪಾಟೀ **ಸವಾಲುಃ 2 ನೇ ಎದುರುದಾರರು ಮತ್ತು ಅವರ ಪರ ವಕೀಲರುಗಳು ಗೈರು ಹಾಜರಿದ್ದಾರೆ. ನ್ಯಾಯ ಹಿತರಕ್ಷಣೆಯ ದೃಷ್ಟಿಯಿಂದ** ಪಾಟೀ **ಸವಾಲಿಗಾಗಿ ಮುಂದೂಡಲಾಗಿದೆ.**</u>

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.